Regd. No M. 1299 . SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 219 | ಗುರುವಾರ 1—5—47 | ಬಿಡಿ ಪ್ರತಿ 3 ಪೈ

ಭಾರತ ಸ್ವಾತಂತ್ರ್ಯ ಘಂಟೆ

ಕಲ್ಕತ್ತಾ, ಏ 29 — ಸಂಯುಕ್ತ ರಾಜ್ಯಾಂಗ ಘಟನೆಯು ಆಶ್ರಯದಲ್ಲಿ, ಭಾರತ ಸ್ವಾತಂತ್ರ್ಯ ಘೋಷಣೆಯ ಸಮಾರಂಭದಲ್ಲಿ ಮತ್ತು ವಾರ್ಷಿಕ ಸ್ವಾತಂತ್ರ್ಯ ಸಮಾರಂಭಗಳಲ್ಲಿ ಬಾರಿಸುವ ಸಲುವಾಗಿ ಕೋವಿ-ಲೋಹದ ಸ್ವಾತಂತ್ರ್ಯ ಘಂಟೆಗಾಗಿ ರೂ 10000 ಕೊಡುವುದಾಗಿ ಬಂಗಾಳಾ ಶಾಸನ ಸಭೆಯ ರಾಷ್ಟ್ರೀಯ ಪಕ್ಷದ ನಾಯಕ ಹರಿಪ್ರಸನ್ ಮಜುಂದಾರ್ ತಿಳಿಸಿದ್ದಾರೆ.

ಬಿರುದುಗಳಿಲ್ಲ

ಸಂಯುಕ್ತ ಭಾರತದ ಯಾವ ಪ್ರಜೆಗಾಗಲೀ ಬಿರುದು ಕೊಡಕೂಡದೆಂದು ರಾಜ್ಯಾಂಗ ರಚನಾ ಸಭೆ ಸರ್ವಾನುಮತದಿಂದ ನಿರ್ಧರಿಸಿತು. ಪರದೇಶಗಳಿಂದ ಸಹಾ ಬಿರುದುಗಳನ್ನು ಸ್ವೀಕರಿಸ ಕೂಡದೆಂದು ನಿರ್ಧರಿತು.

ಬಿ. ಯು. ಎಸ್ ಟಿ.

ಈ ಕಂಪೆನಿಯಲ್ಲಿ 18 ವರ್ಷಗಳ ಕೆಳಗೆ ಹೈದರ್ ಖಾನ್ ಎಂಬ ಕಲಸಗಾರನು ದಿನಕ್ಕೆ 0-14-2 ಕೂಲಿಯ ಮೇಲೆ ಕಂಪೆನಿಯಲ್ಲಿ ಕೆಲಸ ಮಾಡಲು ಸೇರಿದನು. ಈಗ ಅವನ ಕೂಲಿ 1-1-0. ಅವನಿಗಿರುವ ಸಾಲ ರೂ. 500.

ಆದರೆ ಆ ಕಂಪೆನಿಯ ಲಾಭ ವೇನು? 1939-40 ರಲ್ಲಿ 72 ಲಕ್ಷ. 1944 ರಲ್ಲಿ 144 ಲಕ್ಷ. 1945 ರಲ್ಲಿ 118 ಲಕ್ಷ; ಹಾಕಿದ ಬಂಡವಾಳಕ್ಕೆ 5 ರಷ್ಟು ಲಾಭಗಳು ಬಂದಿವೆ.

ಕಾಂಗ್ರೆಸ್ ನಾಯಕರು ನ್ಯಾಯಾನ್ಯಾಯ ವಿಚಾರವನ್ನು ಮರೆಯುತ್ತಿದ್ದಾರೆ. ಈ ದಾಂಡಣ ಆರ್ಥಿಕ ವ್ಯತ್ಯಾಸಗಳೇ ಮುಷ್ಕರಗಳಿಗೆ ಕಾರಣಗಳು. (ಪೂಭೂ)

ಪ್ರೆಸ್ ಕಾನ್ಫರೆನ್ಸ್

ಬೆಂಗಳೂರು, ಏ 30 — ಸಿವಿಲ್ ಸಪ್ಲೈ ಕಂಟ್ರೋಲರವರು ಸಂಸ್ಥಾನದ ಜಲ್ಲಾ ಪತ್ರಿಕಾ ಮೂಲೀಕರ ಸಮ್ಮೇಳನವನ್ನು ತನ್ನ ಆಫೀಸಿನಲ್ಲಿ 3 ನೇ ತಾರೀಖು 3 ಗಂಟೆಗೆ ನಡೆಸಲು ಏರ್ಪಡಿಸಿರುವರು.

ಕೊರೆ ಮತ್ತು ಮತಾಂತರ

ಪೆಷಾವರ್ ಏ 29— ಗಡಿ ನಾಡಿನಲ್ಲಿ ಲೀಗಿನ ಚಳವಳಿ ಕಾಲದಲ್ಲಿ 400 ಮಂದಿಯು ಕೊಲೆಯೂ 300 ಮಂದಿಯು ಮತಾಂತರವೂ ನಡೆಯುತೆಂದು ಹಣಕಾಸಿನ ಮಂತ್ರಿ ಮೆಹರ್ ಚಾಂದ್ ಖನ್ನಾರವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಪ್ಯಾಲಿಸ್ಟೈನಿನ ಸ್ವಾತಂತ್ರ್ಯ

ನ್ಯೂಯಾರ್ಕ್ ಏ 28— ವಿಶ್ವಸಂಸ್ಥೆಯ ಸ್ಟೀರಿಂಗು ಸಮಿತಿಯವರು ಪ್ಯಾಲಿಸ್ಟೈನಿನ ವಿಚಾರದ ಚರ್ಚೆ ಪ್ರಾರಂಭಿಸಿದರು. ಇರಾಕ್, ಲೆಬನಾನು, ಸಾಡಿ ಅರೇಬಿಯಾ ಮತ್ತು ಸಿರಿಯಾ ಪ್ರತಿನಿಧಿಗಳು ಭಾಗವಹಿಸಲು ಸ್ವಾಗತಿಸಲ್ಪಟ್ಟಿದ್ದರು. ಪ್ಯಾಲಿಸ್ಟೈನಿನ ಸ್ವಾತಂತ್ರ್ಯಘೋಷಣೆ ಆಗಬೇಕೆಂದು ಇರಾಕಿನ ವಿದೇಶಮಂತ್ರಿ ನುಡಿದನು.

ಗಾಂಧಿ - ಜಿನ್ನಾ ಮನವಿ ಹಸ್ತಪತ್ರ

ಕಲ್ಕತ್ತಾ, ಏ 29 — ಗಾಂಧಿ — ಜಿನ್ನಾರವರು ದೇಶಕ್ಕೆ ಮಾಡಿರುವ ವಿನಂತಿಯ ನಲವತ್ತು ಸಾವಿರ ಪ್ರತಿಗಳು ಬಂಗಾಳ ಸರ್ಕಾರದಿಂದ ವಿಮಾನದ ಮೂಲಕ ಹಂಚಲಾಗಿದೆ.

ಬೆಂಗಳೂರಿನಲ್ಲಿ ಬೌದ್ಧ ದೇವಾಲಯಕ್ಕೆ ಪ್ರದೇಶ ನಿವೇಶನದ ದಾನ

ಮೈಸೂರು ಸರ್ಕಾರದವರು ಬೆಂಗಳೂರು ಸಿಟಿ ಗಾಂಧಿ ನಗರದಲ್ಲಿ 7220 ಚ. ಗಜ ಜಾಗವನ್ನು ಬೌದ್ಧ ದೇವಾಲಯ ಮತ್ತು ಸಂಸ್ಕೃತ ಶಾಲೆಯನು ಕಟ್ಟಲು ಸಿಲೋನಿನ ಮಹಾಬೋಧಿ ಸೊಸೈಟಿಗೆ ದಾನಮಾಡಿರುವುದಾಗಿ ತಿಳಿಯಬಂದಿದೆ.

ಪತ್ರಿಕಾ ಪ್ರಕಟಣೆ

ಬೆಂಗಳೂರು, ಏ 30 — ನಾಳೆಯದಿವಸ ಸತ್ಯಾಗ್ರಹ ಇಲ್ಲವೆಂದು ಮೈಸೂರು ಕಾಂಗ್ರೆಸ್ಸಿನವರು ನಾಲ್ಕೂವರೆ ಗಂಟೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿದರು.

ಕಾಂಗ್ರೆಸಿಗೆ ವಿಜಯ

ಚಿತ್ರದುರ್ಗ, ಏ 30 — ಹತ್ತು ಸ್ಥಾನಗಳಿಗೆ 9 ಸ್ಥಾನವನ್ನು ಕಾಂಗ್ರೆಸ್ ಚಿತ್ರದುರ್ಗ ಜಿಲ್ಲಾಬೋರ್ಡಿನಲ್ಲಿ ಗಳಿಸಿದೆ.

ಹೂಸ ವೈಸರಾಯರ ಆಗಮನ

ಅಂದಿನ ಗ್ರಹಸ್ಥಿತಿ

(ಆಂಧ್ರ ಹರಿಜನ ಪತ್ರಿಕೆಯಿಂದ)

ವೈಸರಾಯರವರು 22-3-47 ಶುಕ್ರವಾರ ಅಮಾವಾಸ್ಯೆ ಶನಿವಾರ ಪೂರ್ವಾಭಾದ್ರ ನಕ್ಷತ್ರ ಯುಕ್ತ ಕರ್ಕಾಟಕ ಲಗ್ನದಲ್ಲಿ ಮಧ್ಯಾಹ್ನ 3 ಕಾಲು ಗಂಟೆಗೆ ಸಾಲಂವಿಮಾನಾರೋಹಣದಲ್ಲಿ ಇಳಿದರು. ಅಂದಿನ ಗ್ರಹಸ್ಥಿತಿ — ಲಗ್ನದಲ್ಲಿ ತನಿ ಪಂಚಮದಲ್ಲಿ ಗುರು ಕೇತುಗಳು ಸಪ್ತಮದಲ್ಲಿ ಶುಕ್ರ ಅಷ್ಟಮದಲ್ಲಿ ಬುಧ ಕುಜರು ನವಮದಲ್ಲಿ ರವಿಚಂದ್ರರು. ಏಕಾದಶದಲ್ಲಿ ರಾಹು ಇದ್ದಾರೆ. ಗುರು ಶುಕ್ರರು ಪಂಚಮ ಸಪ್ತಮಗಳಲ್ಲಿದ್ದಾರೆ. ಗುರುವಿಗೆ ಕೋಣಾಧಿಪತ್ಯ ಬುಧ ಕುಜರಿಗೆ ಅಷ್ಟಮಾಧಿಪತ್ಯ ರವಿಚಂದ್ರರಿಗೆ ಭಾಗ್ಯಾಧಿಪತ್ಯ ರಾಹುವಿಗೆ ಲಾಭಾಧಿಪತ್ಯ ಉಂಟಾಗಿದೆ.

ಲಗ್ನ ದ್ವಿತೀಯಾಧಿಪತಿಗಳಿಗೆ ಭಾಗ್ಯಾಧಿಪತ್ಯವೂ ಸಪ್ತಮ ಭಾಗ್ಯಾಧಿಪತಿಯಾದ ಗುರುವಿಗೆ ಕೋಣಾಧಿಪತ್ಯವೂ ಉಂಟಾಗಿದೆ. ಲಾಭ ಸುಖಾಧಿಪತಿಯಾದ ಬುಧನಿಗೆ ಅಷ್ಟಮಾಧಿಪತ್ಯವೂ ರಾಜ್ಯ ಪಂಚಮಾಧಿಪತಿಯಾದ ಕುಜನಿಗೆ ಅಷ್ಟಮಾಧಿಪತ್ಯವೂ ಸಪ್ತಮ, ಅಷ್ಟಮಾಧಿಪತಿಯಾದ ಶನಿಗೆ ಲಗಾಧಿಪತ್ಯವೂ ಪ್ರಾಪ್ತವಾಗಿದೆ ಪಾಪಗ್ರಹವಾದ ಸಪ್ತಮ ಅಷ್ಟಮಾಧಿಪತಿ ಲಗ್ನ ಕೇಂದ್ರದಲ್ಲಿದ್ದಾನೆ. ಅದುದರಿಂದ ಅಗ್ರಸ್ಥೀಯ ವೈಚಿತ್ರ್ಯ ರಾಜಗ್ರಹಗಳು ಅನುಕೂಲವಾಗಿ ಕೆಲಸಗಳನ್ನು ಮಾಡುವರು ವ್ಯಾಪಾರಾಧಿಪತಿಯಾದ ಬುಧನೂ ರಾಜ್ಯಪಂಚಮಾಧಿಪತಿಯಾದ ಕುಜನ ಸೇರಿಕೆಯಿಂದ ವ್ಯಾಪಾರ ದೃಷ್ಟಿಗೆ ಭಗ್ನವಾಗಬಹುದು. ಮುಂದನಾಡಿ ಶನಿಗೆ ಸಪ್ತಮ ಅಷ್ಟಮಾಧಿಪತ್ಯ ಉಂಟಾಗಿ ಲಗ್ನಕೇಂದ್ರಗಳಲ್ಲಿರುವದರಿಂದ ಯಾವ ಕಾರ್ಯವನ್ನೂ ನಿಧಾನವಾಗಿ ಮಾಡುತ್ತಾರೆ. ಲಗ್ನ ದ್ವಿತೀಯಾಧಿಪತಿಗಳು ಭಾಗ್ಯಾಧಿಪತಿಯ ಗೃಹದಲ್ಲಿರುವದರಿಂದ ಲಾಭ ಸುಖಾಧಿಪತಿ ಪಂಚಮದಲ್ಲಿರುವದರಿಂದ ಲಾಭ ಸುಖಾಧಿಪತಿಯಾದ ಶುಕ್ರನು ಸಪ್ತಮ ಕೇಂದ್ರದಲ್ಲಿರುವದರಿಂದ ಲಾಭವಿಷಯಗಳಲ್ಲಿಯೂ ಸ್ತ್ರೀಜಾತಿ ಸುಖ ವಿಷಯಗಳಲ್ಲಿಯೂ ಏನಾದರೂ ಒಂದು ಕೊರತೆಯೊಂದಿಗೆ ಪರಿಪಾಲನೆಯನ್ನೂ ಆಲೋಚಿಸಿ ಮಾಡುತ್ತಾರೆ.

ರಾಹುವು ವೃಷಭದಲ್ಲಿರುವುದರಿಂದ, ಶುಕ್ರಸ್ಥಾನವಾದ್ದರಿಂದ ಹಿಂದೂ ಮುಸಲ್ಮಾನರು ಘನತೆ ಹೊಂದಿದ ಗೌರವನೀಯ ವೈಸ್ರಾಯರಿಗೆ ಸಹಾಯಮಾಡಿ ಹಿಂದೂ ಮುಸ್ಲಿಂ ಮೈತ್ರಿಯುಂಟಾಗಿ ಕೇಂದ್ರ ಪ್ರಭುತ್ವವು ಜನ್ಮಾಗಿ ಪರಿಪಾಲನೆ ಮಾಡಲ್ಪಡುವುದ ರಾಜ್ಯಾಧಿಪತಿಯಾದ ಕುಜನಿಗೆ ಅಷ್ಟ ಮಾಧಿಪತ್ಯವು ಬಂದಿರುವುದರಿಂದ ಬುಧನೊಂದಿಗೆ ಸೇರುವುದರಿಂದ. ರಾಜನಿಗೆ ವ್ಯಾಪಾರಸ್ಥರಿಗೆ ಸ್ವಲ್ಪಮಟ್ಟಿಗೆ ನಷ್ಟವುಂಟಾಗುವುದು. ಆ ಮೂಲಕ ಜನಿಸಿದಾರೀ ಜಿಲ್ಲು ತಪ್ಪದೆ ಬರುವುದೆಂದೂ. ಖಿದ್ದರು ಉತ್ಪತ್ತಿಯು ಉತ್ತಮವಾಗಿರುವುದೆಂದೂ ನನ್ನ ಅಭಿಪ್ರಾಯ.

ಹೊಸ ವರ್ಷದಲ್ಲಿ ಚೈತ್ರ ಶುದ್ಧ ಬಿದಿಗೆ ಸೋಮವಾರದ ದಿನ ರಾಜ ಪ್ರತಿನಿಧಿಯಾಗಿ, ರಾಜ್ಯಾಂಗ ಪ್ರಮಾಣವನ್ನು ವೃಷಭ ಲಗ್ನದಲ್ಲಿ ಲಗ್ನಾಧಿಪತಿಯು ಭಾಗ್ಯ ಸ್ಥಾನದಲ್ಲಿರುವಾಗ ಲಾಭಾಧಿಪತಿಯು ಸಪ್ತಮದಲ್ಲಿರುವಾಗ ವ್ಯಯ ಸಪ್ತಮಾಧಿಪತಿಯು ದಶನು ಕೇಂದ್ರದಲ್ಲಿರುವಾಗ ರಾಹುವು ಲಗ್ನದಲ್ಲಿ ತೃತೀಯಾದಲ್ಲಿ ಶನಿಯು ಇದ್ದು ಗುರುವೀಕ್ಷಣೆಯೊಡನೆ ಭಾಗ್ಯಾಧಿಪತಿಯಾದ ಶನಿಯು ತೃತೀಯದಲ್ಲಿ ಬಲಿಷ್ಠನಾಗಿರುವುದರಿಂದ ದ್ವಿತೀಯಾಧಿಪತಿ ಬುಧನೂ ವ್ಯಯ ಸಪ್ತಮಾಧಿಪತಿಯಾದ ಕುಜನೂ ರಾಜ್ಯಸ್ಥಾನದಲ್ಲಿರುವುದರಿಂದ ಇಂಥಾ ಶುಭಲಗ್ನದಲ್ಲಿ ರಾಜಭಕ್ತಿ ಪ್ರಮಾಣವನ್ನು ವಾಡುವ ಘ॥ ಶ್ರೀ ॥ ಗೌ ॥ ವೈಸರಾಯಿಯವರು ಸರ್ವ ಪಕ್ಷ ಸಮ್ಮತತ್ವವುಳ್ಳವರಾಗಿ ಪ್ರಜಾಪರಿಪಾಲನೆಯಲ್ಲಿ ಆಸಕ್ತಿಯುಳ್ಳವರಾಗಿ. ಈ ನೂತನ ವರ್ಷದಲ್ಲಿ ಪ್ರತಿನಿಧಿಯವರೂ ಈ ನೂತನ ರಾಜ್ಯವನ್ನು ಪ್ರಜೆಗಳಿಗೆ ಒಪ್ಪಿಸಲು ಬಂದಿರುವರೆಂದೂ ಅವರು ಆಯುರಾರೋಗ್ಯ ಐಶ್ವರಾಭಿವೃದ್ಧಿಯುಳ್ಳವರಾಗಿರುವರೆಂದೂ ಪೇಲಿನ ಲಗ್ನವನ್ನು ಹಿಡಿದು ನಮ್ಮ ಅಭಿಪ್ರಾಯವು. ಶ್ರೀ ॥ ಗೌ ॥ ವೈಶಾಯರವರಿಗೆ ನಮ್ಮ ಹರಿಜನ ಪತ್ರಿಕೆಯು ಪರವಾಗಿ ಧನ್ಯವಾದಗಳನ್ನು ಸಮರ್ಪಿಸುವೆವು.

ವರ್ತಮಾನ ಸಂಗ್ರಹ

ಮದರಾಸು, ಏ 25 — ಸರ್ಕಾರಿ ಬಸ್ ಸರ್ವಿಸ್ಸಿನ ಕೆಲಸಗಾರರಿಗೆ ಹದಿನಾರು ಗಜ ಗಿರಣಿ ಬಟ್ಟೆ ರಿಯಾಯಿತಿ ತೋರಿಸಲಾಗಿದೆ.

ಲಂಡನ್, ಏ 28 — ಭಾರತೀಯ ಪಬ್ಲಿಕ್ ಹಾಸ್ಪಟ್ಟಲಿನಲ್ಲಿ ಮಾತನಾಡುತ್ತಾ ವಿ ॥ ಅಲೆಗ್ಜಾಂಡರರು ಬ್ರಿಟನ್ ಮತ್ತು ಭಾರತದ ತಾತ್ಕಾಲಿಕ ವಿಷಯಗಳನ್ನು ವಿವರಿಸಿ ' ಈ ಎರಡು ಜನಾಂಗಗಳ ಬೇರೆಯಾಗಿ ದೂರ ಸರಿಯದಿರುವುದು ಅವಶ್ಯವೆಂದು ತಿಳಿಸಿದರು.

30 ರೂ. ಲಂಚ ತಿಂದಾರೋಪದ ಮೇಲೆ ಪುಣೆಯ ಕಾನ್ಸ್ಟೇಬಲ್ ಒಬ್ಬ ದಸ್ತಗಿರಿಯಾಗಿದ್ದಾನೆ.

ನವದೆಹಲಿ ಏ 28 — ರಾಜ್ಯಾಂಗ ಸಭೆಯ ೨ನೇ ಅಧಿವೇಶನವು ಆರಂಭವಾಯಿತು. ಭಾರತದ ವಿಭಾಗದ ಸೂಚನೆಯೇ ಹೆಚ್ಚಾಗಿ ಕಾಣ ಬರುತ್ತದೆ

— —

ಅಕ್ಕರ ಸಾಮಾಜಿಕ

ರ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Quality Printing

L. N. Press

Sriramp et, MYSORE

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಅಠಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

Edited, Printed and Published by M. S Krishna Rao at the Satyavadi Press Chamaraj Agrahar, Mysore.

At Opera

2 ನೇ ವಾರ

ಟಿ ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ, ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೂ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ ಎಂದು ಶಿಪಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್ಪಾಲ್,

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಪರಿಹಾರ. ಗ್ರೈಪ್ ಸಿರಪ್ ರುಚ್ಯಸಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಅವಶ್ಯವಿರುವ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ

ಎಲ್ಲಾ ಮುಖ್ಯ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.,

Malleswaram P. O. Bangalore